**ರಿಟರ್ನಿಂಗ್ ಅಧಿಕಾರಿಗಳ ಕಚೇರಿ**
**ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಸಂಘದ ಚುನಾವಣೆಗಳು**
**ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು**
**ವಿಜ್ಞಾನ ಭವನ, ನಂ.24/2, 21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070**

ದಿನಾಂಕ : 02.12.2024

**ತ್ರೈವಾರ್ಷಿಕ ಚುನಾವಣಾ ಪ್ರಕಟಣೆ**

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ವಿಜ್ಞಾನ ಭವನ, ನಂ.24/2, 21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070 ಈ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಚುನಾಯಿಸುವ ಸಲುವಾಗಿ ಚುನಾವಣೆ ನಡೆಸಲು ಮುಖ್ಯ ಚುನಾವಣಾಧಿಕಾರಿಯಾಗಿ ನಾನು ಅಧಿಕಾರ ವಹಿಸಿಕೊಂಡಿದ್ದು, ಅದರಂತೆ, ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಚುನಾಯಿಸಲು ದಿನಾಂಕ 09.03.2025ರಂದು ಭಾನುವಾರ ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಚುನಾವಣೆಯನ್ನು ನಡೆಸಲಾಗುವುದೆಂದು ತೀರ್ಮಾನಿಸಲಾಗಿದೆ.

ಚುನಾವಣೆಗೆ ಸಂಬಂಧಿಸಿದಂತೆ ಕರಡು ಮತದಾರರ ಪಟ್ಟಿಯನ್ನು ದಿನಾಂಕ 02.12.2024 ರಂದು ಸಂಘದ ಕೇಂದ್ರ ಕಚೇರಿಯಲ್ಲಿ ಹಾಗೂ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲಾಗಿರುತ್ತದೆ.

**ವಿಶೇಷ ಸೂಚನೆ**

1. ಕರಡು ಮತದಾರರ ಪಟ್ಟಿಗೆ ಆಕ್ಷೇಪಣೆಗಳಿದ್ದಲ್ಲಿ ದಿನಾಂಕ 30.12.2024ರ ಒಳಗಾಗಿ ಈ ಕೆಳಕಂಡ ನಮೂನೆಯಲ್ಲಿ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.

| ಕ್ರಮ ಸಂಖ್ಯೆ | ಆಕ್ಷೇಪಣೆ ಸಲ್ಲಿಸುತ್ತಿರುವ ಕರಡು ಮತದಾರರ ಪಟ್ಟಿಯಲ್ಲಿರುವಂತೆ ಸದಸ್ಯರ ಹೆಸರು ವಿಳಾಸ | ಕಾರಣಗಳು | ಆಕ್ಷೇಪಿಸಲಾಗುತ್ತಿರುವ ಬೈಲಾ ಸಂಖ್ಯೆ |
|---|---|---|---|
| | | | |

2. ತಮ್ಮ ಆಕ್ಷೇಪಣೆಯಲ್ಲಿ ಪ್ರತ್ಯೇಕವಾಗಿ ಸದಸ್ಯವಾರು ಆಕ್ಷೇಪಣೆ ಸಲ್ಲಿಸುವುದು, ಒಟ್ಟಾರೆಯಾಗಿ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

3. ಆಕ್ಷೇಪಣೆಗಳು ಬೈಲಾದಲ್ಲಿನ ಉಪಬಂಧಗಳನ್ನು ನಮೂದಿಸಿ ಸಲ್ಲಿಸುವುದು. ಬೈಲಾ ಹೊರತುಪಡಿಸಿ ಸಲ್ಲಿಸಲಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

4. ಆಕ್ಷೇಪಣೆಗಳನ್ನು ಖುದ್ದಾಗಿ ಲಿಖಿತ ರೂಪದಲ್ಲಿ ಸಂಘದ ಕೇಂದ್ರ ಕಚೇರಿಗೆ ಸಲ್ಲಿಸುವುದು. (ಕಚೇರಿಯ ಸಮಯ : ಬೆಳಿಗ್ಗೆ 10.30 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ).

5. ಕರಡು ಮತದಾರರ ಪಟ್ಟಿಯಲ್ಲಿರುವ ಸದಸ್ಯರು ವಿಳಾಸ ಬದಲಾವಣೆಗೆ ಬಯಸಿದ್ದಲ್ಲಿ ಸೂಕ್ತ ದಾಖಲೆಗಳೊಂದಿಗೆ ದಿನಾಂಕ 12.01.2025 ರ 4.00 ಗಂಟೆಯೊಳಗೆ ಸಂಘಕ್ಕೆ ಭೇಟಿ ನೀಡಿ ಬದಲಾಯಿಸಿಕೊಳ್ಳಬಹುದಾಗಿದೆ.

6. ಕರಡು ಮತದಾರರ ಪಟ್ಟಿಯನ್ನು ಸಂಘದಲ್ಲಿ ಲಭ್ಯವಿರುವ ದಾಖಲಾತಿಗಳ ಆಧಾರದ ಮೇಲೆ ತಯಾರಿಸಲಾಗಿದ್ದು, ಸದರಿ ಕರಡು ಮತದಾರರ ಪಟ್ಟಿಯನ್ವಯ ದಾನಿ ಸದಸ್ಯರ/ ಸಂಘ ಸಂಸ್ಥೆಗಳ / ಗ್ರಾಮೀಣ ವಿಜ್ಞಾನ ಕೇಂದ್ರಗಳ ಹೆಸರುಗಳು ತಪ್ಪಿದ್ದಲ್ಲಿ ಅಂತಹ ಸದಸ್ಯರು / ಸಂಘ ಸಂಸ್ಥೆಗಳ / ಗ್ರಾಮೀಣ ವಿಜ್ಞಾನ ಕೇಂದ್ರಗಳ ಪ್ರತಿನಿಧಿಗಳು ಅಗತ್ಯ ದಾಖಲೆಗಳು ಅಂದರೆ ಸಂಘದಿಂದ ಪಡೆದ ರಸೀದಿ, ಸಂಘದ ಸದಸ್ಯತ್ವಕ್ಕಾಗಿ ಸಂಘದಿಂದ ನೀಡಿದ ಪತ್ರ ಇವುಗಳಲ್ಲಿ ಯಾವುದಾದರೂ ಒಂದನ್ನು ತಮ್ಮ ಇತ್ತೀಚಿನ

ಭಾವಚಿತ್ರ ಹಾಗೂ ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿಯೊಂದಿಗೆ ಖುದ್ದಾಗಿ ಸಂಘದ ಕೇಂದ್ರ ಕಚೇರಿಗೆ ದಿನಾಂಕ 09.01.2025 ರೊಳಗೆ ಹಾಜರು ಪಡಿಸಿದ್ದಲ್ಲಿ ಅಂತಹ ಸದಸ್ಯರ / ಸಂಘ ಸಂಸ್ಥೆಯ ಸದಸ್ಯತ್ವ ಪರಿಶೀಲಿಸಲಾಗುವುದು.

7. ಕರಡು ಮಾತದಾರರ ಪಟ್ಟಿಯಲ್ಲಿ ಅನೇಕ ಕೇರಾಫ್ ವಿಳಾಸಗಳಿದ್ದು, ಅಂತಹ ಸದಸ್ಯರು ತಮ್ಮ ಆಧಾರ್ ಪ್ರತಿಯನ್ನು ನೀಡಿ ವಿಳಾಸವನ್ನು ದಿನಾಂಕ 09.01.2025 ರೊಳಗೆ ಖುದ್ದಾಗಿ ಕೇಂದ್ರ ಕಚೇರಿಗೆ ಬಂದು ಬದಲಾಯಿಸತಕ್ಕದ್ದು. ತಪ್ಪಿದ್ದಲ್ಲಿ ಅಂತಹ ಸದಸ್ಯರಿಗೆ ಅರ್ಹ ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲಾಗುವುದಿಲ್ಲ.

8. ಸಂಘದ ಚುನಾವಣೆ ಸಂಬಂಧ ಸಂಘದ ಸದಸ್ಯರಿಗೆ ಈಗಾಗಲೇ ಗುರುತಿನ ಚೀಟಿಯನ್ನು ನೀಡಲಾಗಿರುತ್ತದೆ. ಆದಾಗ್ಯೂ ಸಹ ಈ ಚುನಾವಣೆ ಸಂಬಂಧ ಯಾರಾದರೂ ಸದಸ್ಯರು ತಮ್ಮ ಗುರುತಿನ ಚೀಟಿಯನ್ನು ಪಡೆಯಲು ಬಯಸಿದ್ದಲ್ಲಿ, ದಿನಾಂಕ 19.01.2025 ರೊಳಗೆ ಆಧಾರ್ ಕಾರ್ಡ್ ಮತ್ತು ಇತ್ತೀಚಿನ ಭಾವಚಿತ್ರದೊಂದಿಗೆ ಸಂಘದ ಕೇಂದ್ರ ಕಚೇರಿಗೆ ಖುದ್ದು ಭೇಟಿ ನೀಡಿ ಪಡೆಯಲು ತಿಳಿಸಿದೆ.

9. ಸಂಘ ಸಂಸ್ಥೆ ಹಾಗೂ ಗ್ರಾಮೀಣ ವಿಜ್ಞಾನ ಕೇಂದ್ರದ ಪರವಾಗಿ ಮತ ಚಲಾಯಿಸುವ ಸದಸ್ಯರ / ವ್ಯಕ್ತಿಗಳ ಹೆಸರು, ವಿಳಾಸ ಮತ್ತು ಪೋಟೋಗಳನ್ನು ಸಂಘ ಸಂಸ್ಥೆಯ ಮುಖ್ಯಸ್ಥರು / ಸಂಚಾಲಕರು ಸಂಸ್ಥೆಯ ಲೇಟರ್‌ಹೆಡ್ ನಲ್ಲಿ ದೃಢೀಕೃತ ಸಹಿಯೊಂದಿಗೆ ಮೂಲ ಪ್ರತಿಯನ್ನು ದಿನಾಂಕ 09.01.2025ರೊಳಗೆ ಕೇಂದ್ರ ಕಚೇರಿಗೆ ಕಳುಹಿಸುವುದು.

10. ಸರ್ಕಾರಿ ರಜಾ ದಿನಗಳನ್ನು ಹೊರತುಪಡಿಸಿ ಚುನಾವಣಾಧಿಕಾರಿಯ ಕಚೇರಿ ಕಾರ್ಯ ನಿರ್ವಹಿಸಲಿದೆ.

(ಪವನ್ ಕುಮಾರ್)
ಮುಖ್ಯ ಚುನಾವಣಾಧಿಕಾರಿ
ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು
ಹಾಗೂ
ಸಹಕಾರ ಅಭಿವೃದ್ಧಿ ಅಧಿಕಾರಿ